ಮುಗುಮ್ಮಾಗಿದ್ದಿದ್ದೂ ಹೌದು. ಆಮೇಲೆ ಯಥಾಪ್ರಕಾರ. ಮುನಿಸು ಕರಗಿ ಮೊದಲಿನಂತಾಗಿದ್ದಳು ಶ್ರಾವಂತಿ. ಅವಳ ಸ್ವಭಾವವೇ ಅಂತಾದ್ದು. ಯಾವುದನ್ನೂ ದೀರ್ಘಕಾಲ ಮನಸ್ಸಿನಲ್ಲಿಟ್ಟುಕೊಂಡು ಸಾಧಿಸುವವಳಲ್ಲ ಶ್ರಾವಂತಿ. ಅವಳ ಅಪ್ಪನಂತೆ ಎಂದು ಹೋಲಿಕೆ ಮಾಡಿಯೇ ಮಾಡುತ್ತದೆ ನಕುಲನ ಮನಸ್ಸು. ಇವರಿಬ್ಬರ ಮದುವೆಗೆ ಆ ಮನುಷ್ಯ ಮನಃಪೂರ್ವಕವಾಗಿ ಸಮ್ಮತಿಸಿದವರೇನಲ್ಲ. ಅಂದುಕೊಂಡಂತೆ ಪ್ರತಿರೋಧ ಎದುರಾಗಿಯೇ ಆಗಿತ್ತು. ಜಾತಿಯ ಅಡಚಣೆ ಇಲ್ಲದಿದ್ದರೂ ಆರ್ಥಿಕ ಸ್ಥಾನಮಾನಗಳಲ್ಲಿ ಅಜಗಜಾಂತರ. ಆತ ಸರ್ಕಾರದ ಪೊಗದಸ್ತಾದ ಇಲಾಖೆಯಲ್ಲಿ ಎಂಜಿನಿಯರು. ಬೇಕಾದಷ್ಟು ಆಸ್ತಿಪಾಸ್ತಿ ಮಾಡಿಟ್ಟುಕೊಂಡಿದ್ದ, ಮಾಡಿಕೊಳ್ಳುತ್ತಿದ್ದ ಜಬರ್ದಸ್ತು ಕುಳ. ಒಬ್ಬಳೇ ಮಗಳಿಗೆ ಅದಿನ್ನೆಂತಾ ಕುಬೇರನ ವಂಶಸ್ಥನನ್ನು ತಲಾಷು ಮಾಡಬೇಕೆಂದು ಕನಸು ಕಂಡಿದ್ದರೋ? ಆತನ ಪ್ರಕಾರ ಮಗಳು ಹಾದಿ ತಪ್ಪಿದ್ದಳು. ಬ್ಯಾಂಕಿನ ಕ್ಲರ್ಕ್ ಒಬ್ಬನನ್ನು ಮೋಹಿಸಿದ್ದಳು. ಜೊತೆಯಲ್ಲಿ ಕೆಲಸ ಮಾಡುವ ಯೌವನಸ್ಥರ ನಡುವೆ ಇಂತದೊಂದು ಸಲುಗೆ ಬೆಳೆಯುವುದು ಅಸಹಜವಾಗಲೀ, ಅಸಂಭವವಾಗಲೀ ಆಗಿದ್ದೇನಲ್ಲವಾದರೂ ಶ್ರಾವಂತಿಯ ಅಪ್ಪನ ಪ್ರಕಾರ ಮಗಳು ಮಾಡಿದ್ದು ಮಹಾಪರಾಧ. 'ಕೆಲಸ ಬಿಟ್ಟು ಮನೆಯಲ್ಲಿರು' ಎಂದು ಗೃಹಬಂಧನ ವಿಧಿಸುವವರೆಗೆ ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಅವನೊಬ್ಬನಿದ್ದ, ಶ್ರಾವಂತಿಯ ಅಣ್ಣ. ಪ್ರೀತಿ, ಪ್ರೇಮ, ಪ್ರಣಯ ಅಂದರೆ ಪುಳಕಗೊಳ್ಳುವ ವಯಸ್ಸು ಅವನಿಗೂ. ತಂಗಿಯ ಬೆನ್ನಿಗೆ ನಿಂತು ಸಪೋರ್ಟಿನ ಮಾತಾಡಿದ. "ನೀನೂ ಯಾರನ್ನಾದ್ರೂ ನೋಡ್ಕಂಡಿದೀಯಾ?" ಎಂದು ಅವನನ್ನು ತರಾಟೆಗೆ ತೆಗೆದುಕೊಂಡಿದ್ದರಂತೆ ಅಪ್ಪ.

"ಹೌದೂಂತ್ಲೇ ಇಟ್ಕೊಳ್ಳಿ, ಏನಾಯ್ತೀಗ?" ಖಡಕ್ಕಾಗಿ ಪ್ರಶ್ನಿಸಿ ತಂದೆಯನ್ನು ತಬ್ಬಿಬ್ಬುಗೊಳಿಸಿದವನ ಕುರಿತು ಶ್ರಾವಂತಿಗೆ ಹೆಮ್ಮೆ. ಇಷ್ಟಕ್ಕೇ ಅವಳ ಅಪ್ಪ ಬಗ್ಗಿಬಿಟ್ಟಿರಲಿಲ್ಲ. "ಅವಳು ಜೀವ ತೆಕ್ಕೊಂಡ್ರೆ ಅದರ ಹೊಣೆ ನಿಮ್ಮ ಮೇಲೆ" ಎನ್ನುವ ಮಗನ ಮಾತು ಚುಚ್ಚುವಲ್ಲಿಗೆ ಚುಚ್ಚಿ ಹೆದರಿಸಿತ್ತು. ಮತ್ತೆ ಮಾತಿಲ್ಲದೆ ಈ ಮದುವೆಗೆ ಸಮ್ಮತಿಯ ಮುದ್ರೆ ಒತ್ತಿದ್ದರು ಶ್ರಾವಂತಿಯ ಅಪ್ಪ. ಧಾಂಧೂಂ ಆಗಿ ನಡೆದ ಮದುವೆ. ಆಯಕಟ್ಟಿನ ಸ್ಥಾನದಲ್ಲಿದ್ದ ಉನ್ನತಾಧಿಕಾರಿಯ ಮಗಳ ಮದುವೆ ಅಂದರೆ ಸುಮ್ಮನೇನಾ? ಉಡುಗೊರೆಯ ಮಹಾಪೂರ. ಮಂತ್ರಿಮಹೋದಯರೂ ಹಾಜರಿ ಹಾಕಿ, ಕೈ ಕುಲುಕಿ, ಬೊಕೆ ಹಿಡಿಸಿ, 'ಇದು ದೊಡ್ಡ ಕುದುರೆ ಚೇಷ್ಟೆ' ಅನಿಸಿ ಬೆವರೊರೆಸಿಕೊಂಡಿದ್ದ ಮದುಮಗ. ಅವಳ ಅಪ್ಪನ ಕೋಪತಾಪಗಳೆಲ್ಲಾ ಮಗಳ ಕುತ್ತಿಗೆಗೆ ಕರಿಮಣಿ ಬೀಳುವವರೆಗೆ. ಆಮೇಲೆ ಮಗಳಿಗೆ ಪ್ರಿಯನಾದವನು ಅವಳ ಅಪ್ಪನಿಗೂ ಹಿತವಾಗಿ, ಮೊಮ್ಮಗ ಹುಟ್ಟಿದ ಮೇಲಂತೂ ಹಿಂದೆ ಸಂಭವಿಸಿದ್ದೆಲ್ಲಾ ಸುಳ್ಳೇ ಅನ್ನುವಂತೆ ಗಟ್ಟಿಯಾಗತೊಡಗಿತ್ತು ಅಂಟು, ನಂಟು. ದಂಪತಿ ಪೈಪೋಟಿಗೆ ಬಿದ್ದವರಂತೆ ಬ್ಯಾಂಕಿನ ಪ್ರಮೋಷನ್ ಪರೀಕ್ಷೆಗಳನ್ನು ಪಾಸು ಮಾಡಿ, ಸಂದರ್ಶನ ಎದುರಿಸಿ, ಇಬ್ಬರೂ ಆಫೀಸರಾಗಿ ನಿಯುಕ್ತಿಗೊಂಡು, ಕೈತುಂಬಿ ಚೆಲ್ಲುವಷ್ಟು ಸಂಬಳ, ಸವಲತ್ತುಗಳು. ಮೂರುಮೂರು ವರ್ಷಗಳಿಗೊಮ್ಮೆ ವರ್ಗಾವಣೆ. ಒಂದೇ ಸಿಟಿಯ ಬೇರೆಬೇರೆ ಶಾಖೆಗಳಲ್ಲಿ ದುಡಿಮೆ. 'ಅದೊಂದು ಕಷ್ಟ' ಅನಿಸದೆ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಎಲ್ಲದರಲ್ಲೂ ಹೊಂದಾಣಿಕೆ. ಮನೆಯಲ್ಲಿ ಅಡುಗೆಗೆ ಹೊರತುಪಡಿಸಿ ಸುತ್ತುಗೆಲಸಕ್ಕೆ, ಕೈದೋಟದ ನಿರ್ವಹಣೆಗೆ, ಕಾರು ತೊಳೆಯುವುದಕ್ಕೆ, ಕೊನೆಗೆ ಪುಟಾಣಿ ಕರ್ಣನನ್ನು ಸಾಕಿ ಬೆಳೆಸಿಕೊಟ್ಟಿದ್ದೂ ದಾದಿ.

★★★